ಡ್ಯಾನಿಯ ಪಿಕ್ಚರ್ ಆಗಿತ್ತು. ರಾಜನ್ ಹೇಳ್ತಾನೆ, 'ನಿನಗೆ ಆ ಡ್ಯಾನಿಯ ಫಿಲ್ಮ್ ಹೇಗೆ ಇಷ್ಟವಾಗುತ್ತೋ ಗೊತ್ತಿಲ್ಲ... ನನಗಂತೂ ಅವನ ಬಾಲಿಶ ಹಾಸ್ಯದ ಬಗ್ಗೆ ಒಂಚೂರೂ ನಗು ಬರಲ್ಲ...' 'ಆದರೆ, ತನಗೆ ನಗುಬರುತ್ತೆ... ನಗುವಿನ ಮೇಲೆ ನಗು ಬರುತ್ತೆ. ಆಗೀಗ ಹೇಳದೇ ಬರುತ್ತಾಳೆ... ಇಂದು ಬಂದಂತೆ...'

ಫಿಲ್ಮ್ ನೋಡ್ತಾ ಇರೋವಾಗ ಇಂದು ಹಿಂದೆಂದಿಗಿಂತಲೂ ಹೆಚ್ಚು ದೊಡ್ಡದಾಗಿ ಆಹಾ! ವಾರೆವ್ವಾಹ್!! ಎಂದು ನಗುತ್ತಿದ್ದಳು. ಹತ್ತಿರದಲ್ಲೇ ಕುಳಿತಿರುವ ವ್ಯಕ್ತಿಯ ಮುಖ ಕತ್ತಲಲ್ಲಿ ಕಾಣಿಸುತ್ತಿರಲಿಲ್ಲ. ಆದರೆ, ನಗುವಿನ ಆವಾಜ್ ಖಂಡಿತ ಕೇಳಿಬರುತ್ತಿತ್ತು ಅವಳಿಗೆ ಗೊತ್ತಾಯಿತು: ನಗುವುದರಲ್ಲಿ ಆತ ಅವಳಿಗಿಂತ ಇನ್ನೂ ಎರಡು ಹೆಜ್ಜೆ ಮುಂದಿದ್ದಾನೆ ಎಂದು. ಬಡಪಾಯಿ ಜಿಪುಣನ ಒಂದು ವಿಶೇಷ ದೃಶ್ಯದಲ್ಲಿ ಅವರು ಅದೆಷ್ಟು ಜೋರಾಗಿ ನಕ್ಕರೆಂದರೆ ಪರಸ್ಪರ ಇಬ್ಬರ ಕೈ ಡಿಕ್ಕಿ ಹೊಡೆಯಿತು! 'ಸಾರಿ' ಎನ್ನಲು ಇಬ್ಬರೂ ಪರಸ್ಪರ ಒಬ್ಬರು ಇನ್ನೊಬ್ಬರ ಕಡೆ ತಿರುಗಿದರು... ಆದರೆ, ಸಾರಿ ಅನ್ನುವುದರ ಬದಲಿಗೆ ಇನ್ನೊಮ್ಮೆ ಕೈತಟ್ಟಿ ದೊಡ್ಡದಾಗಿ ನಕ್ಕುಬಿಟ್ಟರು.

ಇದರ ನಂತರ ಪ್ರತಿಬಾರಿಯೂ ಹೀಗೆಯೇ ಆಯಿತು. ನಗು ಬಂದಾಗೆಲ್ಲ ಅಯಾಚಿತವಾಗಿ ಇಬ್ಬರೂ ಪರಸ್ಪರ ನೋಡುತ್ತಿದ್ದರು ಕೂಡಿಯೆ ದೊಡ್ಡದಾಗಿ ನಗುತ್ತಿದ್ದರು.

ಆಟ ಮುಗಿದ ಮೇಲೆ ಇಬ್ಬರೂ ಒಟ್ಟಿಗೇ ಹೊರಬಂದಾಗ ನೋಡುತ್ತಾಳೆ: ನಾಲ್ಕೂವರೆ ಗಂಟೆಗೇನೇ ಸಾಕಷ್ಟು ಕತ್ತಲಾಗಿಬಿಟ್ಟಿತ್ತು. ಆಕಾಶ ಈಗ ಇದೀಗ ಮಳೆ ಸುರಿಯುತ್ತದೊ ಎನ್ನುವಂತೆ ಕಡುಗಪ್ಪಾಗಿ ನಿಂತಿತ್ತು.

'ಎಂಥ ಮನೋಹರವಾದ ದಿವಸ!' ಆಕೆ ತನ್ನ ಪಕ್ಕದವನ ಬಳಿ ಹೇಳಿದಳು.

'ಮನೋಹರ? ಆತ ಕೊಂಚ ಆಶ್ಚರ್ಯದಿಂದ ಹೇಳಿದ: 'ಅಥವಾ ರಂಗೇ ಇಲ್ಲದ ದಿನವೊ!!'

'ಹೌದು ಅದೆಷ್ಟು ಮನೋಹರವಾದ ರಂಗೇ ಇಲ್ಲದ ದಿನ!'

ಆತ ನಕ್ಕುಬಿಟ್ಟ. 'ಅರ್ಥವಾಯಿತು. ಸೂರ್ಯ ಇಲ್ಲಿ ದಿನಾಲೂ ಮೂಡುತ್ತಾನೆ!!

'ಆದರೆ ಮಬ್ಬು ಆಗೀಗ ಕವಿಯುತ್ತೆ... ಎಂಟು ತಿಂಗಳಲ್ಲಿ ಇಂದು ಮೊದಲ ಬಾರಿಗೆ...'

'ಈಗ ಮಾನ್ಸೂನ್ ಶುರು ಆದೀತು...'

'ಖಂಡಿತ... ಇಂದು ಚೆನ್ನಾಗಿ ಮಳೆ ಸುರಿದೀತು...' ಆಕೆ ಹೇಳಿದಳು ಮತ್ತು ಸಹಜವಾಗಿ ಕೇಳಿದಳು 'ಕಾಫಿ ಕುಡಿಯೋಣವೆ?'

'ಅವಶ್ಯ...'

ಚಿಕ್ಕಚಿಕ್ಕ ತುಂತುರು ಹನಿ ಬೀಳತೊಡಗಿತು... ಇಬ್ಬರೂ ಓಡುತ್ತ ಎದುರಿಗಿರುವ ಒಂದು ರೆಸ್ಟುರಾದ ಒಳಹೊಕ್ಕರು. ಅವಳು ತನ್ನ ಕೂದಲನ್ನು ಕೊಡವಿಕೊಂಡಳು ಮತ್ತು ಕೇಳಿದಳು: 'ನಿಮ್ಮ ಛತ್ರಿ ಎಲ್ಲಿ?'

'ಛತ್ರಿ?'

'ಹ್ಞಾ, ನೀವು ಯಾವಾಗಲೂ ಛತ್ರಿಯನ್ನು ಜೊತೆಗೇ ಇಟ್ಟುಕೊಂಡಿರುತ್ತೀರಲ್ಲ?'

ಅವನು ಗಹಗಹಿಸಿ ನಕ್ಕ 'ಇಂಗ್ಲೆಂಡಿನಲ್ಲಿ...' ಆತ ಹೇಳಿದ.

ಕಾಫೀ ಬಂತು ...ಅದನ್ನು ಹೀರುತ್ತ ಇಬ್ಬರೂ ಕವಿಯುತ್ತಿರುವ ಕತ್ತಲಿನಲ್ಲಿ ಸಮುದ್ರವನ್ನು ನೋಡುತ್ತ ತಮ್ಮ ತಮ್ಮ ಯೋಚನೆಯಲ್ಲಿ ಮುಳುಗಿದರು... ಒಮ್ಮೆಲೇ ಅವನ ದನಿ ಕೇಳಿ ಆಕೆ ವಾಸ್ತವಕ್ಕೆ ಬಂದಳು. ಅವನು ಹೇಳುತ್ತಿದ್ದ 'ತಾವು ಏನು ಯೋಚಿಸುತ್ತಿದ್ದೀರಿ? ಅದನ್ನು